ಬೆಲೆಕೊಡುವುದಿಲ್ಲ ನೀನು. ಗಾದಾ ಮನಸ್ಸು ಮಾಡಿದರೆ ನೀನಿಲ್ಲದೆಯೂ ನಾವು ಗೆಲ್ಲಬಲ್ಲೆವು. ಹೋಗು ನೀನು, ನನಗೆ ಮುಖ ತೋರಿಸಬೇಡ' ಎಂದು ಹೇಳಿ ಕೋಪದಿಂದ ಬಿರಬಿರನೆ ನಡೆದು ಗೇಟುದಾಟಿ ಗಾದಾಳನ್ನು ಸ್ಟಾಂಡಿನ ಮೇಲೆ ಕೂರಿಸಿ ನೇರ ಮನೆಯೊಳಕ್ಕೆ ನಡೆದು ದಢಾರನೆ ಬಾಗಿಲು ಹಾಕಿಕೊಂಡ. ದೀಪಕ್ ಅಲ್ಲೇ ನಿಂತು ಮನಸ್ಸನ್ನು ಕಠೋರಗೊಳಿಸಿಕೊಳ್ಳುತ್ತ ಮುಂದಿನ ದಾರಿಯೇನು ಎಂದು ಯೋಚಿಸತೊಡಗಿದ.

ಅಬ್ದುಲ್ಲ ಮನೆಯ ಸುತ್ತಮುತ್ತ ಗುಡಿಸುತ್ತಾ ಕಸ ಒಟ್ಟು ಮಾಡುತ್ತ ಬರುತ್ತಿದ್ದ. ಗಿಡುಗಗಳ ಸ್ಟಾಂಡ್ ಬಳಿ ನೆಲ ತೊಳೆಯುತ್ತ ಶುಚಿಗೊಳಿಸಿ ಕೊಳಕು ನೀರನ್ನು ಮೂಲೆಯಲ್ಲಿದ್ದ ಕೊಳಕುನೀರಿನ ಗಟಾರಕ್ಕೆ ಹೊಯ್ದು ಬರುತ್ತಿದ್ದ. ಈ ಕಾರಣಕ್ಕಾಗಿ ಒಂದು ಭಾಗದ ಬಲೆಯನ್ನು ಬಿಚ್ಚಿ ಹಾಕಿದ್ದ!

ಆ ಕ್ಷಣಕ್ಕೆ ದೀಪಕನಿಗೆ ಅರಬಿ, 'ದೋಹಾದಲ್ಲಿ ಗಾದಾ ಗೆಲ್ಲದಿದ್ದರೆ ಅವಳ ಕತ್ತು ಹಿಸುಕಿ ಬಿಸಾಡಿ ಬರುತ್ತೇನೆ' ಎಂದದ್ದು ನೆನಪಾಯಿತು. ತನ್ನನ್ನೇ ಗಂಭೀರವಾಗಿ ನೋಡುತ್ತ ಕುಳಿತಿದ್ದ ಗಾದಾಳ ಬದುಕು ಭವಿಷ್ಯ ಇನ್ನಾರು ತಿಂಗಳು ಮಾತ್ರವೇ! ಗೆದ್ದರೆ ಮಾತ್ರ ಬದುಕುವ ಅವಕಾಶವೇ! ಕನಿಕರ ಮೂಡಿತು. ಅಬ್ದುಲ್ಲ ಬಿಚ್ಚಿಟ್ಟಿದ್ದ ಬಲೆ ದೀಪಕನ ತಲೆಯಲ್ಲಿ ಹೊಸ ಆಲೋಚನೆ ಮೂಡಿಸಿತು. 'ಹಾರಿ ಹೋಗಿ ನಿನ್ನನ್ನು ನೀನು ಬಚಾಯಿಸಿಕೊಳ್ಳು' ಎಂದು ಮೆಲುದನಿಯಲ್ಲಿ ಹೇಳಿ ಲಗುಬಗೆಯಿಂದ ಗಿಡುಗವನ್ನು ಎತ್ತಿ ಕಾಲಿನ ಹಗ್ಗ ಬಿಡಿಸಿ ತೆರೆದಿದ್ದ ಬಲೆಯ ಸಮೀಪ ತಂದು ಹಾರಿಸಿದ. ಗಾದಾ ಹತ್ತಿರದ ಸ್ಟಾಂಡಿನಲ್ಲಿ ಇಳಿದಳು. ಗಾದಾ ಇನ್ನೂ ಒಂದು ಮೀಟರ್ ಹಾರಿದರೆ ಮುಂದೆ ವಿಶಾಲ ಆಕಾಶ ಸೇರುತ್ತಿದ್ದಳು... ಆದರೂ ಅದು ಮನಸ್ಸು ಮಾಡದೆ ಗಂಭೀರವಾಗಿ ಸ್ಟಾಂಡ್ ಮೇಲೆಯೇ ಕುಳಿತಿತು. ಬಂಧನದಿಂದ ಬಿಡುಗಡೆ ಹೊಂದುವ ಗಾದಾಳನ್ನು ನೋಡುವ ಆಸೆ ಹೊತ್ತು ದೀಪಕ್ ಮತ್ತೂ ಐದು ನಿಮಿಷ ಕಾದ.

ಸ್ವತಂತ್ರವಾಗುವ ಯಾವ ಉತ್ಸುಕತೆಯನ್ನೂ ತೋರಿಸದೆ ಅಬ್ದುಲ್ಲನಂತೆಯೇ ಪಾಲಿಗೆ ಸಿಕ್ಕಿದ್ದನ್ನು ತಿಂದುಕೊಂಡು ಇಲ್ಲೇ ಹಾಯಾಗಿರುತ್ತೇನೆ ಎಂಬಂತೆ ಗಾದಾ ಸ್ಟಾಂಡ್ ಬಿಟ್ಟು ಕದಲಲೇ ಇಲ್ಲ.


## ಗೋಪೀನಾಥ್ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಪ್ರಸಿದ್ಧ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ಅಮ್ಮ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. ಅವರ ಕಥಾಸಂಕಲನಗಳು: 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?'